**Crl.Misc.No. 29/2026**
**PW1**

ದಿನಾಂಕ 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎ.ಟಿ.ಆರ್ ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ನನ್ನ ಮುಂದುವರಿದ ಮುಖ್ಯ ವಿಚಾರಣೆಯ ಸಲುವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

1. ತಹಶೀಲ್ದಾರ್, ಬೆಳ್ತಂಗಡಿ ರವರು ನೀಡಿದ ಅಲಭ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು.

2. ನನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಹಾಗೂ ಆಧಾರ್ ಕಾರ್ಡಿನ ನೋಟರಿ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. (ಸಾಕ್ಷಿಯು ಸದರಿ ದಾಖಲೆಗಳ ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರಿ ದೃಢೀಕೃತ ದಾಖಲೆಗಳೊಡನೆ ತಾಳೆ ಮಾಡಿ ನೋಡಿ ಸರಿ ಇದ್ದ ಕಾರಣ ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.) ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎದುರುದಾರರ ವಿರುದ್ಧ ಏಕತರ್ಫಿ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇರುವುದಿಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ.ನ್ಯಾ.ದಂ, ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)